# ಕರ್ನಾಟಕ ವಿಧಾನ ಪರಿಷತ್

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** | 56 (42) |
| **ಸದಸ್ಯರ ಹೆಸರು :** | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ :** | 04.03.2025 |
| **ಉತ್ತರಿಸುವವರು :** | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿ ಎಷ್ಟು ವಾಣಿಜ್ಯ ಮಳಿಗೆಗಳಿವೆ;<br>ಈ ಮಳಿಗೆಗಳಿಂದ ವಾರ್ಷಿಕ ಎಷ್ಟು ಆದಾಯ ಬರುತ್ತಿದೆ; ಎಷ್ಟು ವಾಣಿಜ್ಯ ಮಳಿಗೆಗಳು ಖಾಲಿ ಇವೆ; ಖಾಲಿ ಉಳಿದಿರಲು ಕಾರಣಗಳೇನು. | • ಚಿಕ್ಕಮಗಳೂರು ನಗರಸಭೆಯ ವ್ಯಾಪ್ತಿಯಲ್ಲಿ ಇರುವ ಒಟ್ಟು **325** ಮಳಿಗೆಗಳಿವೆ.<br>• ಪ್ರಸ್ತುತ ಬಾಡಿಗೆಗೆ ನೀಡಲಾಗಿರುವ 216 ಮಳಿಗೆಗಳಿಂದ ಲಭ್ಯವಾಗುತ್ತಿರುವ ವಾರ್ಷಿಕ ಬಾಡಿಗೆ **ರೂ.136.00 ಲಕ್ಷಗಳು.**<br>• ಖಾಲಿ ಇರುವ ವಾಣಿಜ್ಯ ಮಳಿಗೆಗಳ ಸಂಖ್ಯೆ: **109**<br>**ಹರಾಜಾಗದೇ ಬಾಕಿ ಉಳಿಯಲು ಕಾರಣಗಳು:**<br>1. 29 ಮಳಿಗೆಗಳನ್ನು ಮೂರು ಬಾರಿ ಇ-ಹರಾಜು ಕಂ ಬಹಿರಂಗ ಹರಾಜು ಮಾಡಲಾಗಿದ್ದು, ಬಿಡ್‌ದಾರರು ಭಾಗವಹಿಸಿರುವುದಿಲ್ಲ.<br>2. 32 ಮಳಿಗೆಗಳ ಹರಾಜಿಗೆ ಸಂಬಂಧಿಸಿದಂತೆ ಮೀಸಲಾತಿ ವಿಚಾರದಲ್ಲಿ ತಕರಾರು ಉದ್ಭವಿಸಿದ್ದು ಪ್ರಸ್ತುತ ಹರಾಜು ಪ್ರಕ್ರಿಯೆ ನಡೆಸಲು ಕ್ರಮವಹಿಸಲಾಗುತ್ತಿದೆ.<br>3. 14 ಮಳಿಗೆಗಳಿಗೆ ಹರಾಜು ನಡೆಸಲು ದಿನಾಂಕ: 23.02.2025ರಂದು ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡಿದ್ದು ಹರಾಜು ಪ್ರಕ್ರಿಯೆ ನಡೆಸಲು ಕ್ರಮವಹಿಸಲಾಗುತ್ತಿದೆ.<br>4. 34 ಮಳಿಗೆಗಳು ಶಿಥಿಲಗೊಂಡಿರುತ್ತವೆ. |
| **ಆ)** | ನಗರಸಭೆ ವ್ಯಾಪ್ತಿಯಲ್ಲಿ ಹೊಸ ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡು 02 ವರ್ಷ ಕಳೆದರೂ ಮಳಿಗೆಗಳನ್ನು ಹರಾಜು ಮಾಡದೆ ಇರುವುದರಿಂದ ನಗರಸಭೆಗೆ | ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆರವರ ಪತ್ರ ದಿನಾಂಕ: 20-07-2024 ರಲ್ಲಿ ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿಯ ಕತ್ರಿಮಾರಮ್ಮ ದೇವಸ್ಥಾನದ ಬಳಿಯಲ್ಲಿಯ ಲೋಕೋಪಯೋಗಿ ಇಲಾಖೆಯಿಂದ ಪ.ಜಾತಿ. ಪ.ಪಂಗಡದ ಜನರಿಗೆ ಉಪಯೋಗವಾಗುವಂತೆ ಒಟ್ಟು 32 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ, ನಗರಸಭೆಗೆ 32 ವಾಣಿಜ್ಯ ಮಳಿಗೆಗಳನ್ನು ಹಸ್ತಾಂತರ ಮಾಡಿರುತ್ತಾರೆ. |

| | | |
|---|---|---|
| | ಆರ್ಥಿಕ ನಷ್ಟವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. | ನಿರ್ದೇಶನಾಲಯದ ದಿನಾಂಕ: 06.02.2025ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆಯ ನಡುವಳಿ ದಿನಾಂಕ: 07.09.2020ರಲ್ಲಿ ನಿರ್ಣಯಿಸಿದಂತೆ ನಿಬಂಧನೆ ಕ್ರಮಸಂಖ್ಯೆ: 03ರ ನಿಬಂಧನೆ ಅನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.(ಅನುಬಂಧ-1) |
| **ಇ)** | ಖಾಲಿ ಉಳಿದಿರುವ ಮಳಿಗೆಗಳನ್ನು ಯಾವಾಗ ಹರಾಜು ಮಾಡಲಾಗುವುದು. | **1.** ಹರಾಜಿನಲ್ಲಿ ಯಾರೂ ಭಾಗವಹಿಸದೇ ನಗರದ ವಿವಿಧ ಭಾಗಗಳಲ್ಲಿರುವ ಖಾಲಿ ಇರುವ **29 ಮಳಿಗೆಗಳನ್ನು** ಸರ್ಕಾರದ ಸುತ್ತೋಲೆಯಂತೆ ಬಾಡಿಗೆ ಕಡಿತಗೊಳಿಸಿ ಹರಾಜು ನಡೆಸುವ ವಿಷಯವನ್ನು ಮುಂದಿನ ಕೌನ್ಸಿಲ್ ಸಭೆಯಲ್ಲಿ ವಿಷಯ ಮಂಡಿಸಿ ತೀರ್ಮಾನ ಕೈಗೊಂಡು ಮಳಿಗೆಗಳ ವಿಲೇವಾರಿ ಕುರಿತು ಕ್ರಮವಹಿಸಲಾಗುವುದು.<br>**2.** ಹರಾಜಿಗೆ ಬಾಕಿ ಇರುವ **32 ಮಳಿಗೆಗಳ** ಮೀಸಲಾತಿಯ ವಿಷಯದ ಕುರಿತು ನಿರ್ದೇಶನಾಲಯದ ದಿನಾಂಕ: 06.02.2025ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆಯ ನಡುವಳಿ ದಿನಾಂಕ: 07.09.2020ರಲ್ಲಿ ನಿರ್ಣಯಿಸಿದಂತೆ ನಿಬಂಧನೆ ಕ್ರಮಸಂಖ್ಯೆ: 03ರ ನಿಬಂಧನೆ ಅನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.<br>**3. 14** ಮಳಿಗೆಗಳನ್ನು ಬಾಡಿಗೆಗೆ ಪಡೆದವರು ಬಾಡಿಗೆಯನ್ನು ಪಾವತಿಸದೆ ಇದ್ದುದ್ದರಿಂದ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಮರು ಹರಾಜು ನಡೆಸಲು ದಿನಾಂಕ:23.02.2025 ರಂದು ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿರುತ್ತಾರೆ. ಅದರಂತೆ, ಇ-ಹರಾಜು ಕಂ ಬಹಿರಂಗ ಹರಾಜು ನಡೆಸಲು ಕ್ರಮವಹಿಸಲಾಗುವುದು. |
| **ಈ)** | ಮಳಿಗೆಗಳನ್ನು ಹರಾಜು ಮಾಡದೆ ಖಾಲಿ ಉಳಿಸಿಕೊಂಡು ನಗರಸಭೆಗೆ ಆರ್ಥಿಕ ನಷ್ಟ ಉಂಟು ಮಾಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೆ? | ಉದ್ಭವಿಸುವುದಿಲ್ಲ. |

**ಸಂಖ್ಯೆ: ನಅಇ 44 ಜಿಇಎಲ್ 2025**

**( ರಹೀಂಖಾನ್ )**
ಪೌರಾಡಳಿತ ಮತ್ತು ಹಜ್ ಸಚಿವರು

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ: 080-22866302 7172
ಇ-ಮೇಲ್: dmabr@gmail.com
ವೆಬ್‌ಸೈಟ್: www.municipaladmn.gov.in
3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ. ಅಂಬೇಡ್ಕರ್ ವೀದಿ, ಬೆಂಗಳೂರು - 560001.

ಸಂಖ್ಯೆ: 1648704 /DMA/DEV/SHOP/1/2025. ದಿನಾಂಕ: 06-02-2025

ಇವರಿಗೆ,

ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಚಿಕ್ಕಮಗಳೂರು ಜಿಲ್ಲೆ.

ಮಾನ್ಯರೇ,

ವಿಷಯ: ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿಯ ಕ್ತ್ರಿಮಾರಮ್ಮ ದೇವಸ್ಥಾನದ ಬಳಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಪ.ಜಾತಿ/ಪ.ಪಂಗಡದ ಜನರಿಗೆ ಉಪಯೋಗವಾಗುವಂತಹ ನಿರ್ಮಿಸಿದ ಮಳಿಗೆಗಳ ಹರಾಜು ಕುರಿತು

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: 282792/DUDCCK-ENGGPMISC/6/2023 ದಿನಾಂಕ: 03-01-2025

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರವನ್ನು ಪರಿಶೀಲಿಸಲಾಗಿ, ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿಯ ಕ್ತ್ರಿಮಾರಮ್ಮ ದೇವಸ್ಥಾನದ ಬಳಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಿದ 32 ವಾಣಿಜ್ಯ ಮಳಿಗೆಗಳನ್ನು ಸರ್ಕಾರದ ಲೋಕೋಪಯೋಗಿ ಇಲಾಖೆಯ ನಡವಳಿ ಸಂಖ್ಯೆ: ಲೋಇ/513/ಐಎಫ್‌ಎ/2020(ಇ-ಕಛೇರಿ) ಬೆಂಗಳೂರು ದಿನಾಂಕ: 7-9-2020 ರಲ್ಲಿ ಚಿಕ್ಕಮಗಳೂರು ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಎಸ್. ಸಿ. /ಎಸ್. ಟಿ. ಅನುದಾನದಡಿಯ ಕ್ರಿಯಾ ಯೋಜನೆಯಲ್ಲಿ ಆಯ್ಕೆ ಮಾಡಿಕೊಂಡಿರುವ ಕಾಮಗಾರಿಗಳಲ್ಲಿಯ ನಿಬಂಧನೆಗಳ ಕ್ರಮ ಸಂಖ್ಯೆ: 03 ರಲ್ಲಿ ಪ್ರಥಮ ಆದ್ಯತೆಯನ್ನು " ಸರ್ಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಜಮೀನುಗಳಲ್ಲಿ ಲಭ್ಯವಿರುವ ಕಡೆ(10X10) ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಎಸ್ ಸಿ/ಎಸ್.ಟಿ ನಿರುದ್ಯೋಗಿಗಳಿಗೆ ವ್ಯಾಪಾರಕ್ಕಾಗಿ ಬಾಡಿಗೆ ನೀಡುವ ಸಲುವಾಗಿ ಅನುಕೂಲ ನೀಡುವುದು" ಎಂದು ನಿಬಂಧನೆ ವಿಧಿಸಲಾಗಿರುತ್ತದೆ. ಸದರಿ ನಿಬಂಧನೆಯನುಸಾರ ಕ್ರಮ ಕೈಗೊಳ್ಳಲು ಕೋರಿದೆ.

| ನಗರಸಭೆ, ಚಿಕ್ಕಮಗಳೂರು ಇಂದಾ ಶಾಖೆ | |
|---|---|
| ದಿನಾಂಕ: | 17/2/25 |
| 1. ಪ. ಕ | 5303 |
| 2. ಟಿ. ಅ | |
| 3. ಕ ಸ್ವ ಪ್ರತಿ. | |
| 4. ಕ. | |
| 5. ಕಂ. ಅ. | |
| ಬಗೆ........................ | |

ತಮ್ಮ ವಿಶ್ವಾಸಿ,
Digitally signed by
PRABHULING KAVALIKATTI
Date: [illegible]
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿ.
ಪೌರಾಯುಕ್ತರು ನಗರಸಭೆ ಚಿಕ್ಕಮಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ.

R.O.

Scanned with ACE Scanner